ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



ಯಡಿಯೂರಪ್ಪ ನೇತೃತ್ವದಲ್ಲೇ ಮುಂದಿನ ಚುನಾವಣೆ ಎದುರಿಸಿ: ಅಮಿತ್ ಶಾ ಕರೆ

ವಿವರ : ಪುಟ 8



ಸಂಬಳ ಪಡೆದು ಕೆಲಸ ಮಾಡಿದರೆ ಜನ ಸೇವೆಯೇ ? : ರಾಜಕಾರಣಿಗಳಿಗೆ ನಟ ಉಪೇಂದ್ರ ಪ್ರಶ್ನೆ

ವಿವರ : ಪುಟ 8

ಮುಂದಿನ ಚುನಾವಣೆಗೆ ಕರ್ನಾಟಕ ಸರ್ಕಾರದ ಸಾಧನೆಗಳೇ ಶ್ರೀ ರಕ್ಷೆ : ರಾಹುಲ್

ವಿವರ : ಪುಟ 8






# ಕೋಮುವಾದಿಗಳ ಕೈಯಲ್ಲಿ ಶಿಕ್ಷಣ ಕ್ಷೇತ್ರ

## ವಿಶ್ವವಿದ್ಯಾಲಯದ ಕಾರ್ಯಕ್ರಮದಲ್ಲಿ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಕಳವಳ

**ತುಮಕೂರು**

ಶಿಕ್ಷಣ ಕ್ಷೇತ್ರವು ಇಂದು ಲಾಭಕೋರರ ಹಾಗೂ ಕೋಮುವಾದಿಗಳ ಕೈಗೆ ಸಿಲುಕಿ ನಲುಗುತ್ತಿದೆ. ಮಕ್ಕಳನ್ನು ಸಮಾಜಘಾತುಕರನ್ನಾಗಿ ಬೆಳೆಸಿ ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ. ದೇಶಪ್ರೇಮದ ಹೆಸರಿನಲ್ಲಿ ಮನಸ್ಸುಗಳನ್ನು ಒಡೆಯುವ ಕೆಲಸ ನಡೆಯುತ್ತಿದೆ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪ್ರೊ.ಎಸ್.ಜಿ.ಸಿದ್ದರಾಮಯ್ಯ ಕಳವಳ ವ್ಯಕ್ತಪಡಿಸಿದರು.

ಅವರು ನಗರದ ವಿಶ್ವವಿದ್ಯಾನಿಲಯ ಕಲಾ ಕಾಲೇಜು ಆವರಣದಲ್ಲಿ ಏರ್ಪಡಿಸಿದ್ದ ಸಾಂಸ್ಕೃತಿಕ, ಕ್ರೀಡೆ, ಎನ್‌ಸಿಸಿ, ಎನ್‌ಎಸ್‌ಎಸ್, ರೆಡ್‌ಕ್ರಾಸ್ ಚಟುವಟಿಕೆಗಳ ಉದ್ಘಾಟನಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡುತ್ತಿದ್ದ ಅವರು, ಇತ್ತೀಚಿನ ದಿನಗಳಲ್ಲಿ ಮತೀಯ ಭಾವನೆಗಳು ವಿಜೃಂಭಿಸ ತೊಡಗಿದಂತೆ ಶಿಕ್ಷಣ ಕ್ಷೇತ್ರದಲ್ಲಾಗುತ್ತಿರುವ ಆವರಣ-ಹೂರಣದಲ್ಲಿನ ಸ್ಥಿತಿ ಕಂಡು ಹೆಚ್ಚು ಸಂಕಟವಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

ಶಿಕ್ಷಣ ಕ್ಷೇತ್ರದಲ್ಲಿ ಆವರಣ-ಹೂರಣ ಎರಡು ಅತ್ಯವಶ್ಯಕ, ಇವುಗಳನ್ನಿಟ್ಟುಕೊಂಡು



ದೇಶದ ಸಂಸ್ಕೃತಿ ನೈತಿಕತೆಯನ್ನು ಕಾಪಾಡಬೇಕಾಗಿದೆ. ಶಿಕ್ಷಣ ವ್ಯಾಪಾರೀಕರಣವಾಗಬಾರದು. ಸರ್ಕಾರಿ ಶಾಲೆಗಳ ಉಳಿವಿಗೆ ಹೋರಾಟಕ್ಕೆ ಮುಂದಾಗಬೇಕು. ಗೊಡ್ಡು ಸಂಪ್ರದಾಯದ ನಂಬಿಕೆಗಳು, ಜಾತಿ ಚೌಕಟ್ಟಿನ ವ್ಯವಸ್ಥೆಯಿಂದಾಗಿ ಇಂದು ಶಿಕ್ಷಣ ಕ್ಷೇತ್ರದಲ್ಲಿ ಶಾಂತಿ ಕದಡುತ್ತಿದೆ. ಇದನ್ನು ಬೇರು ಸಮೇತ ಕಿತ್ತುಹಾಕಬೇಕು. ಶಿಕ್ಷಣ ಕ್ಷೇತ್ರವು ಧರ್ಮದ, ಜಾತಿಯ ವಾಸನೆಯೊಳಗೆ ಬೆಳೆಯಬಾರದು ಎಂದರು.

ಶಿಕ್ಷಣ ಕ್ಷೇತ್ರದಲ್ಲಿ ವಿಷವನ್ನು ಬಿತ್ತುವ ವಿಷಜಂತುಗಳಿಂದ ಸಾಂಸ್ಕೃತಿಕತೆಯನ್ನು ಕಾಪಾಡಿಕೊಳ್ಳುವುದು ಕಷ್ಟವಾಗುತ್ತಿದೆ. ಆದ್ದರಿಂದ ಮಕ್ಕಳಿಗೆ ಆದರ್ಶ ಮನೋಭಾವನೆಯನ್ನು ತುಂಬಬೇಕು. ಕೆಟ್ಟ ಬೆಳವಣಿಗೆಯಿಂದ ಮಕ್ಕಳನ್ನು ದೂರವಿಟ್ಟು ಜಾಗೃತಿಗೊಳಿಸಬೇಕು ಎಂದರು.

> **ಆಚಾರ-ವಿಚಾರಗಳನ್ನೊಳಗೊಂಡ ವೈವಿಧ್ಯಮಯ ಬಹುತ್ವಗಳ ರಾಷ್ಟ್ರ ಭಾರತ. ಹಲವು ದೇಶಗಳು ಭಾರತದ ಮೇಲೆ ಆಕ್ರಮಣ ಮಾಡದಿದ್ದರೂ ಸಂಸ್ಕೃತಿಯು ಗರಿಕೆಯಂತೆ ಆಕ್ರಮಣವನ್ನು ತಾಳಿಕೊಂಡು ನಿಂತಿದೆ. ಸಂಸ್ಕೃತಿಯ ಒಳಗಿರುವ ಕೆಲವು ವಿಷಜಂತುಗಳ ವಿಚಾರಗಳ ಆಕ್ರಮಣಕಾರಿಯ ಅಸ್ತ್ರವಾಗಿ ಬಲಿಯಾಗುತ್ತಿರುವುದು ನೆಲಮೂಲ ಸಂಸ್ಕೃತಿಯ ಯುವಕರೇ. ಅದರಿಂದ ಯುವಕರು ಜಾಗೃತರಾಗಿ ದೂರವಿರಬೇಕು.**

ವಿಷಯದ ಉಪಯುಕ್ತತೆ ಜೊತೆಗೆ ಶಿಕ್ಷಕರು ಸಾಮಾಜಿಕ ಹಿನ್ನೆಲೆಯ ಚಟುವಟಿಕೆಗಳ ಸಾಂಸ್ಕೃತಿಕ ವಿಚಾರಧಾರೆಗಳನ್ನು ಬೋಧನೆ ಮಾಡಬೇಕು. ಅದು ಶಿಕ್ಷಕನ ನಿಲುವಾಗಿ ಮಕ್ಕಳಿಗೆ ಸ್ಫೂರ್ತಿ ತುಂಬಬೇಕು. ಕೇವಲ ವರದಿ ಒಪ್ಪಿಸುವ ಶಿಕ್ಷಕರಾಗಬಾರದು. ಬದುಕಿನ ಬಗೆಗಿನ ನಿಲುವಿನ ಲೋಕಜ್ಞಾನ »» 9ನೇ ಪುಟಕ್ಕೆ

## ಕೃಷಿ ಚಟುವಟಿಕೆಗೆ ಹೇಮಾವತಿ ನೀರು ಬಳಸದಿರಲು ಮನವಿ

**ತುಮಕೂರು**

ಗೊರೂರು ಡ್ಯಾಂನಿಂದ ಹೇಮಾವತಿ ನೀರು ಹರಿಯತೊಡಗಿದ್ದು, ಹೇಮಾವತಿ ಜಲಾಶಯ ಯೋಜನೆಯ ಅಚ್ಚುಕಟ್ಟು ಪ್ರದೇಶದಲ್ಲಿ ಬರುವ ಕೆರೆ ಕಟ್ಟೆಗಳಿಗೆ ಹಾಗೂ ಜನ ಜಾನುವಾರುಗಳಿಗೆ ಕುಡಿಯುವ ನೀರಿಗಾಗಿ ಮಾತ್ರ ಹರಿಸಲಾಗುತ್ತಿದೆ.

ಹೇಮಾವತಿ ಜಲಾಶಯಕ್ಕೆ 2017-18ನೇ ವರ್ಷ ನೀರಿನ ಒಳಹರಿವು ನಿರಾಶದಾಯಕವಾಗಿರುವುದರಿಂದ ನೀರಿನ ಅಭಾವ ನೀಗಿಸಿಕೊಳ್ಳಲು ಜಲಾಶಯದಲ್ಲಿರುವ ನೀರಿನ ಲಭ್ಯತೆ ಅನುಸರಿಸಿ ಜನ ಜಾನುವಾರುಗಳಿಗೆ ನೀರಿನ ಉದ್ದೇಶಕ್ಕಾಗಿ ತಾತ್ಕಾಲಿಕವಾಗಿ ಹೇಮಾವತಿ ಎಡದಂಡೆ ನಾಲೆ ಹಾಗೂ ಬಲದಂಡೆ ನಾಲೆಗಳಲ್ಲಿ ನೀರು ಹರಿಸಲಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಹೇಮಾವತಿ ಜಲಾಶಯದ ಒಳಹರಿವಿನ ಪ್ರಮಾಣ ಮತ್ತು ಸಂಗ್ರಹಣಾ ಪ್ರಮಾಣ ಕಡಿಮೆ ಇರುವುದರಿಂದ ಕುಡಿಯುವ ನೀರಿಗಾಗಿ ಮಾತ್ರವೇ ಹೇಮಾವತಿ ನೀರನ್ನು ಹರಿಸಲಾಗುತ್ತಿದೆ. ಆದ ಕಾರಣ ಅಚ್ಚುಕಟ್ಟಿನಲ್ಲಿ ಬರುವ ರೈತರು ನಾಲಾ ನೀರನ್ನು ಆಧರಿಸಿ ಕೃಷಿ ಚಟುವಟಿಕೆಗೆ ತೊಡಗಿಸಿಕೊಳ್ಳಬಾರದೆಂದು, ನೀರಾವರಿ ಇಲಾಖೆಯೊಂದಿಗೆ ಸಹಕರಿಸುವಂತೆ ಗೊರೂರು ಹೇಮಾವತಿ ಯೋಜನಾವೃತ್ತ ಸೂಪರಿಂಟೆಂಡಿಂಗ್ ಇಂಜಿನಿಯರ್ ಹಾಗೂ ಹೇಮಾವತಿ ಜಲಾಶಯ ಯೋಜನಾ ನೀರಾವರಿ ಸಲಹಾ ಸಮಿತಿ ಸದಸ್ಯ ಕಾರ್ಯದರ್ಶಿ ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಒಂದು ವೇಳೇ ಇದಕ್ಕೆ ವಿರುದ್ಧವಾಗಿ ಅಚ್ಚುಕಟ್ಟು ಪ್ರದೇಶದಲ್ಲಿ ಬೆಳೆ ಬೆಳೆದು ಬೆಳೆ ನಷ್ಟವಾದರೆ ಅದಕ್ಕೆ ಅಚ್ಚುಕಟ್ಟುದಾರರೇ ಜವಾಬ್ದಾರರು ಎಂದು ಎಚ್ಚರಿಸಲಾಗಿದೆ.

## ಉದ್ಯಮಶೀಲತಾ ಶೃಂಗಸಭೆ

**ನವದೆಹಲಿ**

ಈ ವರ್ಷ ನವೆಂಬರ್ 28ರಿಂದ ಹೈದ್ರಾಬಾದ್‌ನಲ್ಲಿ ಆರಂಭವಾಗುವ ಜಾಗತಿಕ ಉದ್ಯಮಶೀಲತಾ ಶೃಂಗಸಭೆಯ ಆತಿಥ್ಯವನ್ನು ಭಾರತ ಮತ್ತು ಅಮೆರಿಕ ಜಂಟಿಯಾಗಿ ವಹಿಸಲಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪುತ್ರಿ ಇವಾಂಕ ಅಮೆರಿಕ ನಿಯೋಗದ ನೇತೃತ್ವ ವಹಿಸಲಿದ್ದಾರೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಸರಣಿ ಟ್ವೀಟ್ ಮಾಡಿ ಈ ವಿಷಯ ಪ್ರಕಟಿಸಿದ್ದಾರೆ. ಈ ಶೃಂಗಸಭೆ ವಿಶೇಷವಾಗಿದ್ದು ಜಾಗತಿಕ ನಾಯಕರೊಂದಿಗೆ ವಾಣಿಜ್ಯೋದ್ಯಮಿಗಳನ್ನು ಒಗ್ಗೂಡಿಸಲು ಮತ್ತು ನವೋದ್ಯಮದ ಬೆಳವಣಿಗೆಗೆ ಅವಕಾಶ ಕಲ್ಪಿಸಲಿದೆ ಎಂದು ಮೋದಿ ಹೇಳಿದ್ದಾರೆ.

## ಹಸಿವು ಮುಕ್ತ ಕರ್ನಾಟಕ : ಅಮಿತ್ ಶಾಗೆ ಸಿಎಂ ತಿರುಗೇಟು

**ಬೆಂಗಳೂರು**

ರಾಜ್ಯವನ್ನು ಕಾಂಗ್ರೆಸ್ ಮುಕ್ತ ಮಾಡಲು ಬಿಜೆಪಿ ನಾಯಕರು ಮುಂದಾಗಿದ್ದರೆ, ನಾವು ಹಸಿವು ಮುಕ್ತ ಕರ್ನಾಟಕ ಮಾಡಲು ಹೊರಟಿದ್ದೇವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಇಂದಿಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಅವರಿಗೆ ತಿರುಗೇಟು ನೀಡಿದ್ದಾರೆ.

ರಾಯಚೂರಿನಲ್ಲಿಂದು ಆಯೋಜಿಸಲಾದ ಕಾಂಗ್ರೆಸ್ ಸಮಾವೇಶದಲ್ಲಿ ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದ ಅವರು, ಬಿಜೆಪಿಯವರಿಗೆ ಅಧಿಕಾರ ದಾಹವಿದೆ. ಆದರೆ ನಮಗೆ ಜನರ ಸಮಸ್ಯೆಗಳನ್ನು ಬಗೆಹರಿಸಲು ಆಸಕ್ತಿಯಿದೆ. ನಾವು ಬಸವಣ್ಣನವರ ತತ್ವದಲ್ಲಿ, ಕಾಯಕದಲ್ಲಿ ನಂಬಿಕೆ ಇಟ್ಟವರು. ಕೆಲಸ ಮಾಡುವ ಜನ ಹಸಿವಿನಿಂದ ಮಲಗಬಾರದು. ಪ್ರತಿಯೊಬ್ಬರೂ ಎರಡು ವೇಳೆ ಊಟ ಮಾಡಲೇಬೇಕು. ಬಡವರು, ಕೂಲಿ ಕಾರ್ಮಿಕರು ದುಡಿದು ದುಡಿದು »» 8ನೇ ಪುಟಕ್ಕೆ

## ಚಿಲ್ಲರೆ ಅಂಗಡಿಗಳಲ್ಲಿ ಕಳ್ಳತನ




**ಮಧುಗಿರಿ**

ಯಾರೊ ಅಪರಿಚಿತರು ಶುಕ್ರವಾರ ರಾತ್ರಿ ಮೆಡಿಕಲ್ಸ್ ಮತ್ತು ಚಿಲ್ಲರೆ ಅಂಗಡಿಗಳ ಬೀಗ ಮುರಿದು ಹಣ ದೋಚಿ ಪರಾರಿಯಾಗಿರುವ ಘಟನೆ ನಡೆದಿದೆ.

ತಾಲ್ಲೂಕಿನ ಪುರವರ ಗ್ರಾಮದ ಮಧುಗಿರಿ- ಹಿಂದೂಪುರ ಮುಖ್ಯ ರಸ್ತೆಯಲ್ಲಿರುವ ವಿನಾಯಕ ಮೆಡಿಕಲ್ಸ್‌ನ ಬೀಗ ಮುರಿದು 15000ರೂ ನಗದು. ಮಾರುತಿ ಪ್ರಾವಿಷನ್ ಸ್ಟೋರ್ ಮತ್ತು ಕಾಂಡಿಮೆಂಟ್ಸ್ ನಲ್ಲಿ ಸುಮಾರು 4 ಸಾವಿರ ನಗದು, ಸಾಯಿ ಕಾರ್ನರ್ ಹಾಗೂ ರಮೇಶ್ ರವರಿಗೆ ಸೇರಿದ ಚಿಲ್ಲೆರೆ ಅಂಗಡಿ ಸುಮಾರು 2000 ರೂ ನಗದು ಕಳವು ಮಾಡಲಾಗಿದೆ. ಸುಮಾರು 5 ಅಂಗಡಿಗಳಲ್ಲಿ ಹಣ ಕಳವಾದರೂ ಸಹ ಇದೂವರೆವಿಗೂ ಅಂಗಡಿ ಮಾಲೀಕರು ಯಾರೂ ಕೊಡಿಗೇನಹಳ್ಳಿ ಪೋಲೀಸ್ ಠಾಣೆಗೆ ದೂರು ದಾಖಲಿಸಲು ಮುಂದಾಗಿಲ್ಲ.

## ಅನುಮಾನಾಸ್ಪದ ವ್ಯಕ್ತಿ ಬಂಧನ

**ತುಮಕೂರು**

ಬೈಕ್‌ಗಳಲ್ಲಿ ಬರುತ್ತಿದ್ದ ಇಬ್ಬರು ಆಸಾಮಿಗಳು ಪೊಲೀಸರನ್ನು ನೋಡಿ ಪರಾರಿಯಾಗಲು ಯತ್ನಿಸಿದಾಗ ಒಬ್ಬಾತ ಪೊಲೀಸರಿಗೆ ಸಿಕ್ಕಿಬಿದ್ದು, ಮತ್ತೊಬ್ಬ ಪರಾರಿಯಾದ ಘಟನೆ ನಡೆದಿದೆ.

ಮಧುಗಿರಿ ತಾಲ್ಲೂಕು ಸತ್ತಿಗಾನಹಳ್ಳಿ ಬಳಿ ಆಗಸ್ಟ್ 11 ರಂದು ಬೆಳಗ್ಗೆ ಎರಡು ಬೈಕ್‌ಗಳಲ್ಲಿ ಬರುತ್ತಿದ್ದ ಆಸಾಮಿಗಳು ಪೊಲೀಸರನ್ನು ನೋಡಿ ಗಾಬರಿಯಾದರು. ಪರಾರಿಗೆ ಯತ್ನಿಸಿದರು. ಒಬ್ಬಾತ ತನ್ನ ಬೈಕ್ (ಕೆಎ-40-ಯು-5844) ಅನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದು, ಆತನನ್ನು ಪಾವಗಡ ತಾಲ್ಲೂಕಿನ ಪ್ರಕಾಶ್ ಎಂದು ಗುರುತಿಸಲಾಗಿದೆ. ಸಿಕ್ಕಿಬಿದ್ದವನನ್ನು ಆಂಧ್ರದ ನಾಗರಾಜ ಎಂದು ಗುರುತಿಸಲಾಗಿದೆ. ಈತನ ಬಳಿ ಕೆಎ-06-ಇಜಿ-4704 ನಂಬರಿನ ಬೈಕ್ ಇತ್ತು. ಪೊಲೀಸರು ಈತನನ್ನು ಬಂಧಿಸಿ, ಎರಡೂ ಬೈಕ್‌ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಬಗ್ಗೆ ಮಿಡಿಗೇಶಿ ಠಾಣೆ ಪೊಲೀಸರು ಸಿಆರ್‌ಪಿಸಿ ಕಲಂ 41(ಡಿ), 102 ರೆ/ವಿ ಐಪಿಸಿ ಕಲಂ 379 ಪ್ರಕಾರ ಪ್ರಕರಣ ದಾಖಲಿಸಿದ್ದಾರೆ.

ಕೇಂದ್ರದ ಬಗ್ಗೆ ರಾಹುಲ್ ಗಾಂಧಿ ಹೇಳಿದ್ದು ಏನು ?



ವಿವರ : 8 ನೇ ಪುಟ

## ಭಾವಪೂರ್ಣ ಶ್ರದ್ಧಾಂಜಲಿ



ಜನನ 23-03-1953

ಮರಣ 10-08-2017

**ಶ್ರೀ ಗಣಪತ್ ರಾವ್ (ಗಣೇಶ್)**

ಮಾಲೀಕರು, ವಿಶ್ವಾಸ್ ಜ್ಯೂಯಲರ್ಸ್, ತುಮಕೂರು

ಇವರು ದಿನಾಂಕ : 10-08-2017ನೇ ಗುರುವಾರದಂದು ನಿಧನರಾಗಿದ್ದಾರೆ

ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ

ದುಃಖ ತಪ್ತರು : ಪತ್ನಿ : ಶ್ರೀಮತಿ ಪುಷ್ಪಲತಾ.,

ಜೀತೇಂದ್ರ ಬೋಸ್ಲೆ ಮತ್ತು ಶ್ರೀಮತಿ ಅನಿತ., ವಿಶ್ವಾಸ್ ಮತ್ತು ಶ್ರೀಮತಿ ರೂಪ

ಅಮರ್ ಜಾದವ್ ಮತ್ತು ಶ್ರೀಮತಿ ಲಕ್ಷ್ಮೀ ಮೊಮ್ಮಕ್ಕಳಾದ

ಶೌರ್ಯ, ಕುನಾಲ್, ನಿಶಿತಾ, ಇಶ್ವಾನಿ ಹಾಗೂ ಕುಟುಂಬ ವರ್ಗ






HAVAS/MG/17

12.08.2017.indd 2 8/12/2017 11:47:35 PM